# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 97(158) |
| ಸದಸ್ಯರ ಹೆಸರು | ಶ್ರೀ ಎನ್. ಅಪ್ಪಾಜಿ ಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 08.12.2020. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗಣಿ ಭಾದಿತ ರಸ್ತೆಗಳು ಮತ್ತು ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಯಾವ ಯೋಜನೆ ರೂಪಿಸಿದೆ: | ಭಾರತ ಸರ್ಕಾರದ MM(D&R) Act, 2015 ರ ತಿದ್ದುಪಡಿ ಕಲಂ 9(ಬಿ) ಹಾಗೂ 15(4)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರವು ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನಾ (PMKKKY) ಅಂಶಗಳನ್ನು ಅಳವಡಿಸಿ, ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016 ಹಾಗೂ ತಿದ್ದುಪಡಿ ನಿಯಮಗಳು, 2018 ಮತ್ತು 2020ನ್ನು ಜಾರಿಗೆ ತಂದಿರುತ್ತದೆ. ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಯಮಗಳು, 2016ರ ನಿಯಮ 18(2) ರಂತೆ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಧಿಯಲ್ಲಿ ಸಂಗ್ರಹಿಸಿದ ಒಟ್ಟು ಮೊತ್ತದಲ್ಲಿ ಶೇ. 60:40 ಅನುಪಾತದಂತೆ ಈ ಕೆಳಕಂಡ ಯೋಜನೆಗಳಿಗೆ ಗಣಿ ಭಾದಿತ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಾಗುತ್ತದೆ.<br>**ಶೇಕಡ 60ರ ಅನುಪಾತದಲ್ಲಿ ಆಯೋಜಿಸುವ ಕಾರ್ಯಕ್ರಮಗಳು:**<br>1) ಕುಡಿಯುವ ನೀರು<br>2) ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಅಳತೆ<br>3) ಆರೋಗ್ಯ<br>4) ಶಿಕ್ಷಣ<br>5) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಬಂಧ ಕಾರ್ಯಕ್ರಮ<br>6) ವಯಸ್ಸಾದ ಮತ್ತು ಅಂಗವಿಕಲ ವ್ಯಕ್ತಿಗಳ ಕಲ್ಯಾಣ<br>7) ಕೌಶಲ್ಯ ಅಭಿವೃದ್ಧಿ<br>8) ನೈರ್ಮಲ್ಯತೆ<br>**ಶೇಕಡ 40ರ ಅನುಪಾತದಲ್ಲಿ ಆಯೋಜಿಸುವ ಕಾರ್ಯಕ್ರಮಗಳು:**<br>1) ಭೌತಿಕ ಮೂಲಸೌಕರ್ಯ<br>2) ನೀರಾವರಿ<br>3) ಶಕ್ತಿ ಮತ್ತು ನೀರಿನ ಅಭಿವೃದ್ಧಿ<br>4) ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರದ ಗುಣಮಟ್ಟ ಹೆಚ್ಚಿಸುವುದು. |

--2

| | | |
|---|---|---|
| ಆ) | ಕಳೆದ ಮೂರು ವರ್ಷಗಳಿಂದ ಯಾವ ಯಾವ ಗಣಿ ಬಾಧಿತ ರಸ್ತೆಗಳನ್ನು ಮತ್ತು ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; | ಕಳೆದ ಮೂರು ವರ್ಷಗಳಿಂದ (ಅ)ರ ಉತ್ತರದಲ್ಲಿ ತಿಳಿಸಿರುವ ಪಿಎಂಕೆಕೆಕೆವೈ ಯೋಜನೆಗಳಿಗೆ ರೂ. 3344.03 ಕೋಟಿ ಮೊತ್ತ ಮೀಸಲಿಟ್ಟಿದ್ದು, ರೂ. 620.70 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. |
| ಇ) | ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಗಣಿ ಬಾಧಿತ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ; | ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ, ಮ್ಯಾನೇಜಿಂಗ್ ಕಮಿಟಿಯಲ್ಲಿ, ರೂ.195.00 ಲಕ್ಷಗಳಿಗೆ ಕ್ರಿಯಾಯೋಜನೆ ಅನುಮೋದಿಸಿದ್ದು, ಅದರಲ್ಲಿ ರಸ್ತೆ ಕಾಮಗಾರಿಗೆ ರೂ.25.00 ಲಕ್ಷ ಅನುಮೋದನೆಗೊಂಡಿದ್ದು, ಗೌರ್ನಿಂಗ್ ಕೌನ್ಸಿಲ್ ಅನುಮೋದನೆ ಪಡೆಯಲು ಬಾಕಿ ಇರುತ್ತದೆ. ಅನುಮೋದನೆ ಪಡೆದುಕೊಂಡು ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ. |
| ಈ) | ಬಿಡುಗಡೆ ಮಾಡಿದ್ದಲ್ಲಿ, ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ?<br>(ತಾಲ್ಲೂಕುವಾರು ಹಂಚಿಕೆ ಮಾಡಲಾದ ಅನುದಾನದ ಮಾಹಿತಿ ಒದಗಿಸುವುದು) | ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಪಾಂಡವಪುರ ತಾಲ್ಲೂಕಿಗೆ ರೂ. 10.00 ಲಕ್ಷ ಹಾಗೂ ಕೆ.ಆರ್.ಪೇಟೆ ತಾಲ್ಲೂಕಿಗೆ ರೂ.15.00 ಲಕ್ಷ ಸೇರಿ ಒಟ್ಟು ರೂ.25.00 ಲಕ್ಷಗಳನ್ನು ಅನುಮೋದಿಸಿದ್ದು, ಗೌರ್ನಿಂಗ್ ಕೌನ್ಸಿಲ್ ಅನುಮೋದನೆ ಪಡೆಯಲು ಬಾಕಿ ಇರುತ್ತದೆ. ಅನುಮೋದನೆ ಪಡೆದುಕೊಂಡು ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಸಿಐ 653 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು